ವಸ್ತುಗಳನ್ನು ಅದರಲ್ಲಿ ಇಟ್ಟಳು. ಅದರಲ್ಲೇ ಆ ಅದ್ಭುತವಾದ ಫೇಂಡಾಮೃಗವೂ ವಾಸ ಮಾಡಲು ತೊಡಗಿತು.

ಫೇಂಡಾಮೃಗದ ಹಿರಿಮೆ ನಮ್ಮ ಮನೆಯ ಹತ್ತಿರ ಇರುವವರಿಗೆ ಮಾತ್ರವಲ್ಲ, ಊರಹೊರಗೂ ಹೆಚ್ಚಾಗೆ ತಿಳಿದಿತ್ತು. ವಿಶೇಷವಾಗಿ ಹೆಂಗಸರಿಗೂ ಮಕ್ಕಳಿಗೂ ಅದು ಕುತೂಹಲ ಕೆರಳಿಸುವ ವಸ್ತುವಾಗಿ ಬದಲಾಗಿತ್ತು. ಅದರಲ್ಲಿ ನಾಣ್ಯಗಳನ್ನು ತುಂಬಿಟ್ಟಿರುವುದರಿಂದ ಪ್ರದರ್ಶನದ ವಸ್ತುವಾಗಿ ಇಡಲು ಅತ್ತಿಗೆ ಇಷ್ಟಪಡುತ್ತಿರಲಿಲ್ಲ. ಪ್ರಾರಂಭದಲ್ಲಿ ಅದನ್ನು ತೋರಿಸುವುದರಲ್ಲಿ ಆಸಕ್ತಿ ತೋರಿಸಿದರೂ ನಂತರ ಮುಚ್ಚಿಯೇ ಇಟ್ಟಳು.

ಫೇಂಡಾಮೃಗದ ಪ್ರಾಬಲ್ಯ ಹೆಚ್ಚಾಗುತ್ತಾ ಹೋದಂತೆ ಅದು ಎಲ್ಲಿ ಕಳವಾಗಿಬಿಡುವುದೋ ಎಂಬ ಭಯ ಅತ್ತಿಗೆಯನ್ನು ಕಾಡತೊಡಗಿತು. ಅದಕ್ಕೆ ಅವರು ಅದನ್ನು ತಾನು ಹೆಣೆದ ವಯರ್ ಚೀಲದಲ್ಲಿ ಬಟ್ಟೆಗಳ ಮಧ್ಯೆ ಬಚ್ಚಿಟ್ಟಳು.

ಒಂದು ರೂಪಾಯಿ ನಾಣ್ಯಗಳು ಯಾರಿಗೆ ದೊರತರೂ ತನಗೆ ಕೊಡಬೇಕೆಂಬ ಅವಳ ಬೇಡಿಕೆಯನ್ನು ಸಣ್ಣವರಾದ ನಾವು ಮನಸಾರೆ ಒಪ್ಪಿಕೊಂಡೆವು. ಇದು ನಮಗೆ ಅದರ ಮೇಲೆ ಯಾವುದೋ ಬಾಧ್ಯತೆ ಇರುವಂತಹ ಭಾವನೆಯನ್ನು ಮೂಡಿಸಿತು.

ನಮ್ಮ ಕೈಗೆ ದೊರಕುವ ಒಂದು ರೂಪಾಯಿ ನಾಣ್ಯಗಳನ್ನು ಫೇಂಡಾಮೃಗಕ್ಕೆ ಒಪ್ಪಿಸಿದೆವು. ಅದಕ್ಕಾಗಿ ಅಂಗಡಿಗೆ ಹೋಗುವ ಅವಕಾಶಗಳನ್ನು ಮೊದಲಿನಂತೆ ತಪ್ಪಿಸುತ್ತಿರಲಿಲ್ಲ. ಅಂಗಡಿಯವರ ಬಳಿ ಒಂದು ರೂಪಾಯಿ ನಾಣ್ಯಗಳನ್ನ ಚಿಲ್ಲರೆಯಾಗಿ ಕೊಡುವಂತೆ ಗೆಂಜುತ್ತಿದ್ದೆವು. ಇದರಲ್ಲಿ ಪೈಪೋಟಿ ಇತ್ತು. ಹೆಚ್ಚಾಗಿ ನಾಣ್ಯಗಳನ್ನು ಕೊಟ್ಟು ಭಾಗವಹಿಸುವುದರ ಮೂಲಕ ಹೆಚ್ಚು ಹಕ್ಕನ್ನು ಪಡೆಯಲು ಪ್ರಯತ್ನಿಸಿದೆವು. ಎಲ್ಲಾ ನಾಣ್ಯಗಳನ್ನು ಅತ್ತಿಗೆ ದಯಾ ದಾಕ್ಷಿಣ್ಯವಿಲ್ಲದೆ ಆ ಫೇಂಡಾಮೃಗದ ಹೊಟ್ಟೆಯೊಳಗೆ ಸೇರಿಸಿದಳು.

ಈ ತರಹದ ಫೇಂಡಾಮೃಗವನ್ನು ಪಡೆಯಲು ಆಸೆಪಟ್ಟು ಕೆಲವರು ಅವಳನ್ನು ಸಂಪರ್ಕಿಸಿದಾಗ ಆಕೆ ವ್ಯಥೆಪಟ್ಟಳು. ಪಕ್ಕದಲ್ಲಿ ಎಲ್ಲೂ ದೊರಕದು ಎಂದಳು. ಉಳಿದವರು ತಿಳಿದುಕೊಂಡಂತೆ ಅವಳು ಸುಳ್ಳು ಹೇಳಿರಲಿಲ್ಲ. ಅವಳಿಗೆ ಅದು ದೊರಕಿದ್ದೆ ಆಕಸ್ಮಿಕವಾಗಿ. ಒಬ್ಬ ಗೆಳತಿಯಿಂದ ಬಳುವಳಿಯಾಗಿ ಬಂದದ್ದು ಅದು.

ಕುಂಬಾರನ ಬಳಿ ಮಾಡಿಸಿಕೊಳ್ಳಬಹುದೆಂದು ನಂಬಿದ ಕೆಲವರು ನಿರಾಶೆ ಹೊಂದಿದರು. ಕಾರಣ ಅವನು ಫೇಂಡಾಮೃಗವನ್ನೆ ನೋಡಿರಲಿಲ್ಲ. ಅದು ಹೇಗಿರುವುದೆಂದು ಅವನಿಗೆ ಗೊತ್ತಿರಲಿಲ್ಲ. ತಂದು ತೋರಿಸಿದರೆ ಅದೇ ರೀತಿ ಮಾಡಿಕೊಡುವುದಾಗಿ ಹೇಳಿದ. ಆದರೆ ಅತ್ತಿಗೆ ಅದನ್ನು ಕೊಡಲು ಮುಂದಾಗಲಿಲ್ಲ. ಹೊರಗೆ ತೆಗೆದು ತೋರಿಸಲು ಅವಳು ಒಪ್ಪಲಿಲ್ಲ. ಕೆಲವು ಹುಡುಗರು ಜೇಡಿಮಣ್ಣಿನಿಂದ ಮಾಡಲು ಯತ್ನಿಸಿ ಸೋತರು. ಅವರಿಂದ ಅದರ ಹೊಟ್ಟೆಗೆ ತೂತುಮಾಡಿ ನಾಣ್ಯಗಳನ್ನು ಒಡಲಲ್ಲಿ ತುಂಬಿಡಲು ಖಾಲಿಜಾಗವನ್ನು ಮಾಡಲಾಗಲಿಲ್ಲ. ಹೆಚ್ಚಾಗಿ ಅದು ಫೇಂಡಾಮೃಗದಂತಿಲ್ಲದೆ ಹಂದಿಯ ತಲೆಯೂ ಆನೆಯ ದೇಹವೂ ಇರುವ ಒಂದು ಬೆರಕೆಯ ಮೃಗದಂತಿತ್ತು. ನನಗೆ ತಿಳಿದಂತೆ ಈ ಜಗತ್ತಿನಲ್ಲಿ ಅಂತಹ ಒಂದೇ ಒಂದು ಫೇಂಡಾಮೃಗ ಮಾತ್ರವೇ ಇದ್ದು, ಅದು ಅತ್ತಿಗೆಯ ಬಳಿ ಮಾತ್ರವೇ ಇತ್ತು.

ಅದು ಒಂದು ದೊಡ್ಡ ಕಪ್ಪು ದುಂಬಿಯಂತೆ ಇದೆ ಎಂದಳು ನನ್ನ ತಂಗಿ. 'ಹಂದಿ ಗೋಲಕ' ಎಂದು ವಾಕರಿಕೆ ಬರುವಂತೆ ನಟಿಸಿದಳು. ಈ ಫೇಂಡಾಮೃಗದಿಂದ ನನ್ನ ಅತ್ತಿಗೆ ಮತ್ತು ತಂಗಿಯ ಮಧ್ಯೆ ದೊಡ್ಡ ದ್ವೇಷ ಒಂದು ಹೊಗೆಯಾಡುತ್ತಿತ್ತು. ನಮ್ಮ ಕುತೂಹಲವನ್ನು ಗೇಲಿಮಾಡುವಂತೆ ಅದನ್ನು